# ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಿರುಗುಪ್ಪ

## ಸಿ.ಸಿ. ನಂ. 102/2020

**ಸಿ.ಡಬ್ಲ್ಯೂಃ 3 ಪಿ.ಡಬ್ಲ್ಯೂಃ 1**

| | | |
|---|---|---|
| ಸಾಕ್ಷಿದಾರನ ಹೆಸರು | : | ಮಣಿಕಂಠ |
| ತಂದೆಯ ಹೆಸರು | : | ದೊಡ್ಡಶೇಖಣ್ಣ |
| ವಯಸ್ಸು | : | 31 ವರ್ಷ |
| ಕೆಲಸ | : | ವ್ಯವಸಾಯ |
| ವಾಸ | : | ತೆಕ್ಕಲಕೋಟೆ |

**ಸಾಕ್ಷಿಗೆ ದಿನಾಂಕಃ 24.02.2026 ರಂದು ಪ್ರಮಾಣ ವಚನ ಬೋಧಿಸಲಾಯಿತು**

## ಮುಖ್ಯ ವಿಚಾರಣೆ : ಸ.ಸ.ಅ. ರವರಿಂದ

1. ಸಾಕ್ಷಿ ಪಂಚನಾಮೆಯಲ್ಲಿದ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಪಂಚನಾಮೆಯನ್ನು ನಿಪಿಃ 1 ಎಂದು ಹಾಗೂ ಸದರಿ ಸಹಿಯನ್ನು ನಿಪಿಃ 1(ಎ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಪೋಲಿಸ್ ಠಾಣೆಯಲ್ಲಿ ಮಾಡಿದ್ದೇನೆ. ಸುಮಾರು 5 ವರ್ಷಗಳ ಹಿಂದೆ ಮಾಡಿದ್ದೇನೆ. ನನ್ನ ಸಮಕ್ಷಮ ಯಾವುದೇ ಜಪ್ತ ಮಾಡಿಲ್ಲ. ನಾನು ಮು.ಮಾ ಹಾಗೂ ಆರೋಪಿಯನ್ನು ನೋಡಿಲ್ಲ.

**(ಈ ಹಂತದಲ್ಲಿ ಸಾಕ್ಷಿದಾರರು ಅಭಿಯೋಜಕರಿಗೆ ಸಹಾಯವಾಗಿ ಸಾಕ್ಷ್ಯನುಡಿಯುತ್ತಿಲ್ಲ ಆದ ಕಾರಣ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಲು ಮತ್ತು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಗಿದೆ)**

## ಪಾಟೀ ಸವಾಲುಃ ಸ.ಸ.ಅ. ರವರಿಂದ

2. ದಿಃ 09.10.2019 ರಂದು ರಾತ್ರಿ 09.00 ಗಂಟೆಗೆ ಪೋಲಿಸರು ನನ್ನನ್ನು ಹಾಗೂ ಚಾಸಾ 2 ರವರನ್ನು ಹಳೆ ಪೋಲಿಸ್ ಠಾಣೆಯ ಹತ್ತಿರ ಕರೆಯಿಸಿಕೊಂಡು, ತೆಕ್ಕಲಕೋಟೆ ಪಟ್ಟಣದ ಹಳೆ

ಪೋಲಿಸ್ ಠಾಣೆಯ ಹತ್ತಿರ ಒಂದು ಮನೆಯಲ್ಲಿ ಅಕ್ರಮವಾಗಿ ಅಕ್ಕಿ ವಿತರಣೆ ಮಾಡುತ್ತಿದ್ದಾರೆ ಎಂಬ ಮಾಹಿತಿಯನ್ನು ಬಂದ ಬಗ್ಗೆ ತಿಳಿಸಿದರು ಎಂದರೆ ಸರಿಯಲ್ಲ. ನಾವು, ಪೋಲಿಸರು ಹಾಗೂ ಅಧಿಕಾರಿಗಳು ಹೋಗಿ ಸದರಿ ಮನೆಯ ಮೇಲೆ ದಾಳಿ ಮಾಡಿ ಪರಿಶೀಲಿಸಲಾಗಿ ಅಲ್ಲಿ ವಿರೇಶಪ್ಪ ಎನ್ನುವ ವ್ಯಕ್ತಿ ಇದ್ದು ವಿವಿಧ ಪ್ಲಾಸ್ಟಿಕ್ ಚೀಲದಲ್ಲಿ ಪಡಿತರ ಅಕ್ಕಿ ಇತ್ತು ಅದನ್ನು ಪರಿಶೀಲಿಸಲಾಗಿ 40 ಕೆ ಜಿ ತೂಕದ 120 ಪ್ಲಾಸ್ಟಿಕ್ ಚೀಲದಲ್ಲಿ 48 ಕ್ವಿಂಟಲ್ ಪಡಿತರ ಅಕ್ಕಿ ಚೀಲಗಳು ಇದ್ದು ಪೋಲಿಸರು ಅವುಗಳನ್ನು ಜಪ್ತಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಅದರಲ್ಲಿ ತಜ್ಞರ ಪರೀಕ್ಷೆಗಾಗಿ ಎಲ್ಲಾ ಚೀಲಗಳಿಂದ ತಲಾ 10 ಗ್ರಾಂ ನಷ್ಟು ಒಟ್ಟು 1.2 ಕೆ ಜಿ ತೆಗೆದು ಒಂದು ಬಿಳಿ ಬಟ್ಟೆಯ ಚೀಲದಲ್ಲಿ ತೆಗೆದು ಎಸ್ ಎಚ್ ಒ ಮೋಹರಿನಿಂದ ಸೀಲ್ ಮಾಡಿದರು ಎಂದರೆ ಸರಿಯಲ್ಲ. ಸ್ಥಳದಲ್ಲಿ ರಾತ್ರಿ 10.00 ರಿಂದ 11.00 ವರೆಗೇ ನಿಪಿಃ 1 ರಂತೆ ಪಂಚನಾಮೆಯನ್ನು ಜರುಗಿಸಿದರು ಎಂದರೆ ಸರಿಯಲ್ಲ. ಈ ಎಲ್ಲಾ ವಿಚಾರ ಗೊತ್ತಿದ್ದರು ಸಹ ಸುಳ್ಳು ಸಾಕ್ಷಿ ನುಡಿಯುತ್ತಿದೆನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿತರ ಪರವಾಗಿ : ಇಲ್ಲ**

ಮರು-ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೆ. ಸರಿ ಇದೆ.

**ಸಿವಿಲ್ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಧೀಶರು, ಸಿರುಗುಪ್ಪ .**